ದಿ:**24.02.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲು:- ಆರೋಪಿ ಪರ H.H., ವಕೀಲರಿಂದ:-

ನಾನು ಪ್ಯಾರಾಮೇಡಿಕಲ್ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಆರೋಪಿ ನಮ್ಮ ತಂದೆ ಯಿಂದ ಪರಿಚಯ ಇರುತ್ತಾರೆ . ನಮ್ಮ ತಂದೆ ಫೈನಾನ್ಸ್ ವ್ಯವಹಾರ ಮಾಡುತ್ತಿರಲಿಲ್ಲ , ನಾನು ಸಹ ಫೈನಾನ್ಸ್ ವ್ಯವಹಾರ ಮಾಡುತ್ತಿಲ್ಲ . ನಾನು ಇದೇ ರೀತಿ ಚೆಕ್ ಅಮಾನತು ಪ್ರಕರಣಗಳನ್ನು ಬೇರೆ ಆರೋಪಿಗಳ ಮೇಲೆ ದಾಖಲಿಸಿರುತ್ತೇನೆ ಎಂದರೆ ಸರಿ. ಅದರಂತೆ ನಾನು ಮಂಜುನಾಥ ಎಂಬುವವರ ವಿರುದ್ಧ ಸಿಸಿ **1082/2022** ರಂತೆ ಪ್ರಕರಣ ಚೆಕ್ ಅಮಾನತು ದಾಖಲಿಸಿರುತ್ತೇನೆ ಎಂದರೆ ಸರಿ. ಹಾಗೆ ಮೊಹಮ್ಮದ್ ಅಲಿ ಎಂಬುವವರ ವಿರುದ್ಧ ಸಿಸಿ **1065/2022** ರಂತೆ ಚೆಕ್ ಅಮಾನತು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ. ಕುಮಾರ್ ಗೋಸಾಯಿ ಎಂಬುವವರ ವಿರುದ್ಧ ಸಿಸಿ **1053/2022** ರಂತೆ ಚೆಕ್ ಅಮಾನತು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ. ಅದರಂತೆ ಸಿದ್ದೇಶ್ ಪಿ ಎಂ ಎಂಬುವವರ ವಿರುದ್ಧ ಸಿಸಿ **33/2021** ರಂತೆ ಚೆಕ್ ಅಮಾನತು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ. ಅದರಂತೆ ರೆಹಮತ್ ಉಲ್ಲಾ ಎಂಬುವವರ ವಿರುದ್ಧ ಸಿಸಿ **964/2024** ರಂತೆ ಚೆಕ್ ಅಮಾನತು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ. ಸದರಿ ಪ್ರಕರಣಗಳಲ್ಲಿ ನಾನು ಸಾಲ ನೀಡುವ ಬಗ್ಗೆ ಯಾವುದೇ ಲೈಸೆನ್ಸ್ ಅನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ನಾನು ಫೈನಾನ್ಸ್ ವ್ಯವಹಾರ ಮಾಡುವುದಿಲ್ಲ ಎಂದು ಹೇಳುತ್ತಾರೆ . ಸಾಮಾನ್ಯವಾಗಿ ಈ ರೀತಿ ಸಾಲವಾಗಿ ವ್ಯವಹಾರ ಮಾಡುವಾಗ ಸರ್ಕಾರದಿಂದ ಪರವಾನಗೆ ಪಡೆಯಬೇಕಾಗುತ್ತದೆ ಎಂದರೆ ಸಾಕ್ಷಿ ನಾನು ಫೈನಾನ್ಸ್ ವ್ಯವಹಾರ ಮಾಡುವುದಿಲ್ಲ ಎಂದು ಹೇಳುತ್ತಾರೆ . ನಾನು ಫೈನಾನ್ಸ್ ವ್ಯವಹಾರ ಮಾಡುತ್ತೇನೆ , ಈ ಬಗ್ಗೆ ಸುಳ್ಳು ಹೇಳುತ್ತೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ನಾನು ಯಾರಿಗಾದರು ಸಾಲವನ್ನು ನೀಡಬೇಕಾದರೆ ಅವರು ಸಾಲವನ್ನು ಕೇಳಿದ ದಿನದಿಂದ ಸ್ವಲ್ಪ ಸಮಯ ತಗೆದುಕೊಂಡು ಅವರಿಗೆ ಸಾಲ ನೀಡುತ್ತೇನೆ ಎಂದರೆ ಸರಿ. ಆರೋಪಿ ನನಗೆ ಸಾಲವಾಗಿ ಹಣ ಬೇಕು ಎಂದು ಕೇಳಿದ 1 ತಿಂಗಳ ನಂತರ ಅವರಿಗೆ ಸಾಲವಾಗಿ ಹಣವನ್ನು ನೀಡಿರುತ್ತೇನೆ . ಸದರಿ ವಿಷಯವನ್ನು ನಾನು ನನ್ನ ನೋಟೀಸ್ , ಪಿರ್ಯಾದಿ ನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ಈ ಬಗ್ಗೆ ತಿಳಿಸಲು ತೊಂದರೆ ಇರುವುದಿಲ್ಲ ಎಂದರೆ ಸರಿ. ನಾನು ಆರೋಪಿಗೆ

ಕಳುಹಿಸಿದ ನೋಟೀಸ್ ನಿಪಿ 5 ರಂತೆ ಆರೋಪಿಗೆ ಜಾರಿ ಆಗಿರುತ್ತದೆ . ನಿಪಿ 5 ರಲ್ಲಿ ಕಾಣುವ ನಿಂಗಪ್ಪ ಸಹಿಯು ಆರೋಪಿಯ ಸಹಿ ಇರುತ್ತದೆ . ನಿಪಿ 5 ರಲ್ಲಿ ಕಾಣುವ ಸಹಿಗೂ ಮತ್ತು ನಿಪಿ 1 ರಲ್ಲಿ ಕಾಣುವ ಸಹಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ನಿಪಿ 1 ಚೆಕ್ ಅನ್ನು ಆರೋಪಿಯು ನನಗೆ ತುಂಬಿಸಿ ನೀಡಿರುತ್ತಾರೆ. ನಾನು ಹೇಳುವ ಹಾಗೆ ಆರೋಪಿ ನನಗೆ ನಿಪಿ 1 ಚೆಕ್ ಅನ್ನು ತುಂಬಿಸಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 5 ದಾಖಲೆ ಮತ್ತು ನಿಪಿ 1 ರಲ್ಲಿ ಆರೋಪಿ ಸಹಿ ವ್ಯತ್ಯಾಸ ಇರುತ್ತದೆ . ಆದ ಕಾರಣ ನಾವು ಕಳುಹಿಸಿದ ನೋಟೀಸ್ ಆರೋಪಿಗೆ ತಲುಪಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿ ದಿಃ 27.09.2023 ರಂದು ನೋಟೀಸ್ ಕಳುಹಿಸಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 3 ನೋಟೀಸ್ ನಲ್ಲಿ ಆರೋಪಿ ನನಗೆ ನಿಪಿ 1 ಚೆಕ್ ನಲ್ಲಿ ಕೇವಲ ದಿನಾಂಕವನ್ನು ನಮೂದು ಇರುತ್ತದೆ ಎಂದರೆ ಸರಿಯಲ್ಲ. ನಿಪಿ 1 ಖಾಲಿ ಚೆಕ್ ನಮ್ಮ ತಂದೆಗೆ ನೀಡಿದ ಚೆಕ್ ಇರುತ್ತದೆ , ನಾನು ಅದನ್ನು ದುರ್ಭಳಕೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಅಲಿಸಿ ಸಮಯ ನೀಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

ಸಿವಿಲ್ ನ್ಯಾಯಾಧೀಶರು, ಜಗಳೂರು